ಸಾಕ್ಷಿಯನ್ನು ಕರೆಸಲಾಯಿತು ಪ್ರಮಾಣ ವಚನ ಮಾಡಿಸಲಾಯಿತು

**ದಿ:06-03-2023**

ಪಾಟೀ ಸವಾಲುಃ ಶ್ರೀ ಬಿ ಎ ವಕೀಲರಿಂದ

ನಾನು ಬಡ್ಡಿ ವ್ಯವಹಾರ ಮಾಡುತ್ತಿಲ್ಲ. ನಾನು ಕಾಫಿ ಪ್ಲಾಂಟರ್. ಈ ಮೊದಲು ಒಂದು ಚೆಕ್ ಕೇಸ್ ಇದ್ದು ಅದು ರಾಜಿಯಾಗಿರುತ್ತದೆ. ದಿನೇಶ್ ಮತ್ತು ಪವನ್ ರವರ ವಿರುದ್ಧ ಖಾಸಗಿ ಪಿರ್ಯಾದಿ ಸಂಖ್ಯೆಃ **246/2019** ರಂತೆ ಪ್ರಕರಣ ದಾಖಲು ಮಾಡಿರುತ್ತೇನೆ ಎಂದರೆ ಸಾಕ್ಷಿದಾರರು ಅದು ಜಮೀನಿಗೆ ಸಂಬಂಧಿಸಿದ ವ್ಯವಹಾರಕ್ಕೆ ಸಂಬಂಧಿಸಿದ್ದ ಪ್ರಕರಣವಾಗಿರುತ್ತದೆ ಎಂದು ನುಡಿಯುತ್ತಾರೆ. ಮನೋಜ್ ಕುಮಾರ್ ವಿರುದ್ಧ ಪಿ ಸಿ ಆರ್ ನಂಃ **48/2020** ರಂತೆ ಪ್ರಕರಣ ದಾಖಲು ಮಾಡಿದ್ದೇನೆ ಎಂದರೆ ಸರಿ, ಸಾಕ್ಷಿದಾರರು ಅದು ರಾಜಿಯಾಗಿರುತ್ತದೆ ಎಂದು ನುಡಿಯುತ್ತಾರೆ. ನಾನು ಹಣಕಾಸಿನ ವ್ಯವಹಾರ ಮಾಡುವುದಿಲ್ಲ, ಸ್ನೇಹಿತರ ಜೊತೆ ಹಣಕಾಸಿನ ವ್ಯವಹಾರ ಮಾತ್ರ ಇರುತ್ತದೆ ಎಂದು ನುಡಿಯುತ್ತಾರೆ

ನಾನು ಆದಾಯ ತೆರಿಗೆ ಪಾವತಿದಾರನಲ್ಲ. ಆರೋಪಿ ನಮ್ಮ ಊರಿನವರು ಎಂದರೆ ಸರಿ. **2018** ರಲ್ಲಿ ಆರೋಪಿ ನನ್ನ ಬಳಿ **1,10,000/-** ರೂ ಹಣ ಪಡೆದಿರುತ್ತಾರೆ ಎಂದರೆ ಸರಿ, ಸಾಕ್ಷಿದಾರರು ಮುಂದುವರೆದು ಅದನ್ನು ಅವರು ಮೂರು ದಿನಗಳಲ್ಲಿ ಮರುಪಾವತಿ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಆರೋಪಿ ಗಂಡನ ಖಾತೆಯಿಂದ ನನ್ನ ಖಾತೆಗೆ ಆರ್ ಟಿ ಜಿ ಎಸ್ ಮುಖಾಂತರ ಒಂದು ಲಕ್ಷ ನನ್ನ ಖಾತೆಗೆ ಅದೇ ರೀತಿ **10** ಸಾವಿರ ಆರೋಪಿ ಖಾತೆಯಿಂದ ನನ್ನ ಖಾತೆಗೆ ಜಮಾ ಆಗಿರುತ್ತದೆ ಎಂದರೆ ಸರಿ. ಆರೋಪಿ ಮಾಸಿಕ ಶೇ **7** ರಷ್ಟು ಬಡ್ಡಿಯಂತೆ **1,84,800/-** ರೂ ಪಾವತಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸದರಿ ವ್ಯವಹಾರಕ್ಕೆ ಸಂಬಂಧಿಸಿದಂತೆ ಒಂದು ಖಾಲಿ ಚೆಕ್ ಮತ್ತು **500** ರೂ ಖಾಲಿ ಸಹಿ ಉಳ್ಳ ಖಾಲಿ ಬಾಂಡನ್ನು ಪಡೆದುಕೊಂಡಿದ್ದೆನು ಎಂದರೆ ಸರಿಯಲ್ಲ. ಆರೋಪಿ ನನಗೆ ದಿಃ **08-07-2021** ರಂದು **1,10,000/-** ರೂ.ಗಳಿಗೆ ಸಂಬಂಧಿಸಿದಂತೆ ಭದ್ರತೆಗಾಗಿ ಪಡೆದ ಚೆಕ್ ಅನ್ನು ವಾಪಸ್ಸು ಕೊಡುವಂತೆ ನೋಟೀಸ್ ನೀಡಿರುತ್ತಾರೆ ಎಂದರೆ ಸರಿ. ಸದರಿ ನೋಟೀಸ್‌ಗೆ ನಾನು ನಮ್ಮ ವಕೀಲರ ಮುಖಾಂತರ ಮರು ಉತ್ತರ ನೀಡಿದ ಬಗ್ಗೆ ನೆನಪಿಲ್ಲ. ಸಾಕ್ಷಿದಾರರು **1,10,000/-** ರೂ.ಗಳಿಗೆ ಸಂಬಂಧಿಸಿದಂತೆ ಆರೋಪಿ ಭದ್ರತೆಗಾಗಿ ಯಾವುದೇ ಚೆಕ್ಕನ್ನು ನೀಡಿರುವುದಿಲ್ಲ ಎಂದು ನುಡಿಯುತ್ತಾರೆ.

( ಮುಂದುವರೆದ ಪಾಟೀ ಸವಾಲಿಗಾಗಿ ವಕೀಲರು ಕಾಲಾವಕಾಶ ಕೋರಿದ್ದು ನೀಡಿ ಮುಂದೂಡಲಾಯಿತು )

ಉಕ್ತ ಲೇಖನದಂತೆ ಮುಕ್ತ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ ಹೆ ಕೇ ಸ ಇ

**ಜೆ.ಎಂ.ಎಫ್.ಸಿ,**
ಸಕಲೇಶಪುರ